

## ಅಪರೂಪದ ಕಲಾ ಕೌಶಲ್ಯ

ಈ ಚಿತ್ರದಲ್ಲಿ ಕಾಣುತ್ತಿರುವುದು ಟೈಫ್‌ರೈಟರ್‌ನಂತೇ ಕಂಡರೂ ಇದು ಅದಲ್ಲ. ಕಲಾ ಕೌಶಲ್ಯದಿಂದ ಮಾಡಿದ ಸುಂದರ ಪೆಟ್ಟಿಗೆ. ಸುಮಾರು 150 ವರ್ಷದ ಹಳೆಯ ವಸ್ತು ಇದಾಗಿದ್ದು, ಹಳೆಯಕಾಲದಲ್ಲಿ ಶಾನುಭೋಗರು, ಕುಲಕರ್ಣಿಗಳು ಇಂತಹ ಪೆಟ್ಟಿಗೆಯನ್ನು ಹೆಚ್ಚಾಗಿ ಬಳಸುತ್ತಿದ್ದರು. ಇಂತಹ ಪೆಟ್ಟಿಗೆಯಲ್ಲಿ ಕಾಗದ ಪತ್ರಗಳು, ಬೀಗದ ಕೈ ಮುಂತಾದ ಪದಾರ್ಥಗಳನ್ನು ಇಡುತ್ತಿದ್ದರು. ಚಿತ್ರದಲ್ಲಿ ಕಾಣುತ್ತಿರುವುದು ಬೆಂಗಳೂರಿನ ಬಸವನಗುಡಿಯಲ್ಲಿ ವಾಸವಾಗಿರುವ ಜಗನ್ನಾಥ್ ಅವರ ಮನೆಯಲ್ಲಿದೆ. ಇದರಲ್ಲಿ ಕೆಲ ಗುಪ್ತವಾದ ಚಿಕ್ಕಚಿಕ್ಕ ಗೂಡುಗಳಿವೆ. ಇವುಗಳನ್ನು ತೆಗೆಯುವುದು ಹೇಗೆಂದು ಗೊತ್ತಾಗುವುದೇ ಇಲ್ಲ. ಇದನ್ನು ಸೀಕ್ರೆಟ್ ಲಾಕರ್ ಅಂತಲೂ ಅನ್ನಬಹುದು. ಈ ಆ್ಯಂಟಿಕ್ ವಸ್ತುವನ್ನು ಮಾಡಿಸಿದವರು ಬಸವನಗುಡಿಯ 'ಶಾಫ್ ರಾಮ್ ರಾಮ್' ಎಂದೇ ಹೆಸರಾಗಿದ್ದ 'ರಾಮ್ ರಾಮ್' ಅವರು. ತೇಗದ ಮರದಿಂದ ಮಾಡಿದ ಈ ಪೆಟ್ಟಿಗೆಯನ್ನು ಅವರ ಮೊಮ್ಮಗ ಜಗನ್ನಾಥ್ ಉಪಯೋಗಿಸುತ್ತಿದ್ದಾರೆ.

—ಡಿ.ಎಸ್. ಸುಧಾ ಜಗನ್ನಾಥ್, ಬೆಂಗಳೂರು



## ಸೋದೆಯ ವೀಣಾಪಾಣಿ ಮಾರುತಿ

ಪಕ್ಕಕ್ಕೆ ಮುಖಮಾಡಿ ನಿಂತಿರುವ ಮಾರುತಿ ಮೂರ್ತಿಯನ್ನು ಸಾಮಾನ್ಯವಾಗಿ ಎಲ್ಲೆಡೆ ಕಾಣುತ್ತೇವೆ. ಆದರೆ ಉತ್ತರ ಕನ್ನಡ ಜಿಲ್ಲೆಯ ಶಿರಸಿ ಪಟ್ಟಣದಿಂದ 25ಕಿ.ಮೀ. ದೂರದಲ್ಲಿರುವ ಸೋದೆಯ ಶ್ರೀ ವಾದಿರಾಜ ಮಠದ ಆವರಣದಲ್ಲಿ ಎದುರು ಮುಖದ ವೀಣಾಪಾಣಿ ಮಾರುತಿ ಮೂರ್ತಿ ಮೊದಲ ನೋಟದಲ್ಲಿಯೇ ಭಕ್ತರನ್ನು ಆಕರ್ಷಿಸುತ್ತದೆ.

ಪೌರಾಣಿಕ ಹಿನ್ನೆಲೆಯುಳ್ಳ ಸೋದೆಯ ಧವಲಗಂಗಾ ಪುಷ್ಕರಣಿಯ ದಂಡೆಯ ಮೇಲೆ ನೇರ ಮುಖಮಾಡಿ ಕುಳಿತು ಒಂದು ಕೈಯಲ್ಲಿ ವೀಣೆ, ಇನ್ನೊಂದರಲ್ಲಿ ರಾಮಾಯಣ ಹೊತ್ತಿಗೆಯನ್ನು ಹಿಡಿದುಕೊಂಡು ಅದರಲ್ಲಿನ ಶ್ಲೋಕಗಳನ್ನು ಮಾರುತಿ ನಿತ್ಯ ಗಾನ ಮಾಡುತ್ತಾನೆ ಎಂಬುದು ಆಸ್ತಿಕರ ನಂಬಿಕೆ.

ಶ್ರೀ ವಾದಿರಾಜರ ಏಕಾಂತ ಭಕ್ತರಾದ ದಿವಂಗತ ವಾಳವೇಕರ ವೆಂಕಣ್ಣಾಚಾರ್ಯ ಅವರು ಸುಮಾರು ಐದು ನೂರು ವರ್ಷಗಳ ಹಿಂದೆಯೇ ಈ ಮೂರ್ತಿಯನ್ನು ಸ್ಥಾಪಿಸಿದ್ದಾರೆ ಎಂಬ ಉಲ್ಲೇಖವೂ ಇತಿಹಾಸದಲ್ಲಿದೆ..

—ಶ್ರೀರಂಗ ವೆಂ.ಕಟ್ಟಿ, ಯಲ್ಲಾಪುರ

